

# ನಿಸರ್ಗ ಕಡೆದ ಶೆನಾಂಡೊ ಗುಹೆಗಳು

ಭೂಗತಲೋಕದ ವಿಸ್ಮಯಗಳಲ್ಲಿ ಒಂದಾಗಿರುವ ಶೆನಾಂಡೊ ಗುಹೆಗಳು ಪ್ರಕೃತಿಯ ಸೋಜಿಗವನ್ನು ತೋರುವ ತಾಣವೂ ಹೌದು.

■ ದ್ವಾರಕಾನಾಥ್

ಅಮೆರಿಕಕ್ಕೆ ಈಚೆಗೆ ಭೇಟಿ ಕೊಟ್ಟಿದ್ದ ನಾವು, ಹಲವು ಜಾಗಗಳಿಗೆ ಬಸ್ಸಿನಲ್ಲಿಯೇ ಪ್ರಯಾಣಿಸಿದೆವು. ಬಸ್ಸಿನಲ್ಲಿ ನ್ಯೂಯಾರ್ಕ್ ದಾಟಿ ನ್ಯೂಜೆರ್ಸಿ ಮೂಲಕ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯ ನೋಡಿದ ನಂತರ ವರ್ಜಿನಿಯಾ ಪ್ರಾಂತ್ಯ ಪ್ರವೇಶಿಸಿದ್ದೆವು. ವರ್ಜಿನಿಯಾಗೆ ಬರುತ್ತಿದ್ದಂತೆ ನಮ್ಮ ಬಸ್ಸಿನ ನಿರ್ವಾಹಕ, ‘ಜಗತ್ತಿನಲ್ಲೇ ವಿಸ್ಮಯಕಾರಿ ಜಾಗವನ್ನು ತೋರಿಸಲು ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ’ ಎಂದು ಹೇಳುತ್ತಿದ್ದಂತೆ ನಮ್ಮ ಉತ್ಸಾಹ ಗರಿಗೆದರಿತು. ಹಾಗೆ ಕಾತರದಿಂದ ಕಾಯುತ್ತಿದ್ದ ನಮ್ಮನ್ನು ಕರೆದುಕೊಂಡು ಹೋದದ್ದು ‘ಶೆನಾಂಡೊ ಗುಹೆ’ಗಳಿಗೆ. ನಿಜಕ್ಕೂ ನಿಸರ್ಗದ ಅದ್ಭುತವೇ ‘ಶೆನಾಂಡೊ ಗುಹೆಗಳು’.

ಹೊರಗಿನಿಂದ ಕಟ್ಟಡದಂತೆ ತೋರುವ ಈ ಜಾಗದ ಒಳಗೆ ಹೋಗುತ್ತಿದ್ದಂತೆ ಬೇರೆಯದೇ ಪ್ರಪಂಚ ತೆರೆದುಕೊಳ್ಳುತ್ತದೆ. ಭೂಗತವಾಗಿರುವ ಗುಹೆ ಪ್ರವೇಶಕ್ಕೂ ಮುನ್ನ ಅಲ್ಲೇ ಒಂದು ಅಂಚೆ ಕಚೇರಿ ಗಮನಸೆಳೆಯುವಂತಿದ್ದು, ‘ಅಮೆರಿಕದ ಅತ್ಯಂತ ಪುಟ್ಟ ಅಂಚೆ ಕಚೇರಿ’ ಎಂಬ ಫಲಕವೂ ಗೋಚರಿಸುತ್ತದೆ.

ಪ್ರಕೃತಿಯೇ ಕಡೆದ ಈ ಸುಂದರ ಗುಹೆಗಳನ್ನು ರಾಷ್ಟ್ರೀಯ ಸ್ಮಾರಕವಾಗಿ ಘೋಷಿಸಲಾಗಿದೆ. 1886ರಲ್ಲಿ ಈ ಭೂಗತ ಗುಹೆಗಳು ಪತ್ತೆಯಾದರೂ ಇವು ಸಾರ್ವಜನಿಕರಿಗೆ ತೆರೆದುಕೊಂಡದ್ದು 1922ರಿಂದ. ಮಿಲಿಯಾಂತರ ವರ್ಷಗಳ ಹಿಂದೆ ಅಂತರ್ಗಾಮಿ ನದಿಗಳು ಹಾಗೂ ಭೂಮಿಯ ಚಲನವಲನಗಳಿಂದ ಈ ಗುಹೆಗಳು ರೂಪುಗೊಂಡಿವೆ. ಹರಿಯುತ್ತಿದ್ದ ನೀರಿನಲ್ಲಿದ್ದ ಖನಿಜಗಳು, ವಿಶೇಷವಾಗಿ ಕ್ಯಾಲ್ಸಿಯಂ, ಮ್ಯಾಗ್ನೀಷಿಯಂಗಳು ಈ ಜಾಗದ ಮಣ್ಣು, ಬಂಡೆಗಳೊಂದಿಗೆ ಬೆರೆತು ಚಿತ್ರ ವಿಚಿತ್ರ ಆಕಾರಗಳನ್ನು ಪಡೆದುಕೊಂಡಿವೆ. ಖನಿಜ ಹಾಗೂ ನೀರು ಬೀಳುವ ರಭಸದ ಆಧಾರದಲ್ಲಿ ಈ ಗುಹೆಗಳು ಬಗೆಬಗೆಯ ಆಕಾರಗಳನ್ನು ಪಡೆದುಕೊಂಡಿವೆ ಎಂದು ವಿಜ್ಞಾನ ಹೇಳಿದರೂ ಇದು ಸೃಷ್ಟಿಯ ಚಮತ್ಕಾರವೆನ್ನುವುದನ್ನೇ ನನ್ನ ಮನಸ್ಸು ಒಪ್ಪಿಕೊಂಡಿತ್ತು.

ಗುಹೆಯ ಒಳಗಿನ ಗೋಡೆಗಳನ್ನು ಮುಟ್ಟುವುದೂ ನಿಷೇಧ. ಹದ್ದು ಮೀರಿದವರಿಗೆ ಜುಲ್ಮಾನೆ ಹಾಗೂ ಜೈಲುವಾಸ. ಈ ಗುಹೆಗಳನ್ನು ನೋಡಲು ಎಲಿವೇಟರ್ ಸೌಕರ್ಯ ಇದ್ದರೂ ಕಾಲ್ನಡಿಗೆಯಲ್ಲೇ ಹೋಗುವುದು ಚೆಂದ. ಆಗಲೇ ಪ್ರಕೃತಿಯ ಈ ಅದ್ಭುತವನ್ನು ಮನಸಾರೆ ನೋಡಿ ಸವಿಯಲು ಸಾಧ್ಯ. ಮೈ ನಡುಗಿಸುವ ತಂಪಾದ ವಾತಾವರಣ, ಸೂರಿನಿಂದ ಅಲ್ಲಲ್ಲಿ ತೊಟ್ಟಿಕ್ಕುವ ತಣ್ಣೀರಿನ ನಡುವೆ ನಡೆದು ಹೋಗುತ್ತಿದ್ದರೆ, ಮೂಕವಿಸ್ಮಿತರಾಗುವುದು ಖಚಿತ.

ಭೂಗತ ಗುಹೆಗಳನ್ನು ಹದಿನೇಳು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅದರಲ್ಲಿ ರೇನ್‌ಬೋ ಲೇಕ್, ಡೈಮಂಡ್ ಕ್ಯಾಸ್ಕೇಡ್, ಫೇರಿಲ್ಯಾಂಡ್ ಲೇಕ್, ಗ್ರೋಟೊ ಆಫ್ ದಿ ಗಾಡ್ಸ್, ಕ್ಯಾಪಿಟಲ್ ಡೋಂ, ಬ್ರೇಕ್‌ಫಾಸ್ಟ್ ಬ್ಯಾಕನ್ ಆಕರ್ಷಕವಾಗಿವೆ. ಪ್ರತಿ ಗುಹೆಯ ರಚನೆಯೂ ವಿಭಿನ್ನವಾಗಿದ್ದು, ಆಯಾ ಆಕಾರ ಹಾಗೂ ವಿಶೇಷತೆಗೆ ತಕ್ಕಂತೆ ಗುಹೆಗಳಿಗೆ ಹೆಸರು ನೀಡಲಾಗಿದೆ. ಗುಹೆಗಳ ನೈಸರ್ಗಿಕ ಚೆಲುವಿನ ಜೊತೆಗೆ ಕೃತಕ ಬೆಳಕಿನ ವಿನ್ಯಾಸವನ್ನೂ ತಳುಕು ಹಾಕಲಾಗಿದೆ.

ಗಂಟೆ ಅವಧಿಯಲ್ಲಿ ಸುಮಾರು ಒಂದು ಮೈಲು ಸುತ್ತು ಹೊಡೆಯುವುದರೊಂದಿಗೆ ಶೆನಾಂಡೊ ಗುಹೆಗಳ ದರ್ಶನ ಮನಸ್ಸಿಗೆ ಆಹ್ಲಾದ ತುಂಬುತ್ತದೆ. ಮತ್ತೊಮ್ಮೆ ಬರಬೇಕೆಂಬ ಹಂಬಲವನ್ನೂ ಹುಟ್ಟು ಹಾಕುತ್ತದೆ.

ಪ್ರತಿಕ್ರಿಯಿಸಿ: feedback@sudha.co.in